

# ನೈಸರ್ಗಿಕ ಸೇತುವೆ!

ಚಿರಾಪುಂಜಿ ಎಂದಾಕ್ಷಣ ನೆನಪಾಗುವುದು ಭಾರತದಲ್ಲಿ ಹೆಚ್ಚು ಮಳೆ ಬೀಳುವ ಪ್ರದೇಶ ಎಂದು. ಆದರೆ ಚಿರಾಪುಂಜಿ ಇಷ್ಟಕ್ಕೇ ಸೀಮಿತವಾಗಿಲ್ಲ. ನಿಸರ್ಗವೇ ನಿರ್ಮಿಸಿದ ಅದ್ಭುತ ಸೇತುವೆಯೊಂದು ಈ ಪ್ರದೇಶಕ್ಕೆ ಹೆಚ್ಚಿನ ಮೆರುಗು ನೀಡಿದೆ. ಜತೆಗೆ ಜಗತ್ತಿನ ಗಮನ ಸೆಳೆಯುವಂತೆಯೂ ಮಾಡಿದೆ.

ಹೌದು. ಇಲ್ಲಿರುವುದು ಮಾನವ ನಿರ್ಮಿತ ಸೇತುವೆಯಲ್ಲ, ಅದು ನಿಸರ್ಗದ ಕೊಡುಗೆ. ಇದಕ್ಕೆ ಮನುಷ್ಯನ 'ಕಾಣಿಕೆ'ಯೂ ಸೇರಿ ಅಚ್ಚರಿ ಮೂಡಿಸುತ್ತಿದೆ. ಜಗತ್ತಿನ ಪ್ರಥಮ ಬೃಹತ್ ನೈಸರ್ಗಿಕ ಸೇತುವೆ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ. ಇದರ ಹೆಸರು 'ಡಬ್ಬಲ್ ಡೆಕರ್ ರೂಟ್ ಬ್ರಿಡ್ಜ್'.

ಇಲ್ಲಿ ನಾನ್‌ಗ್ರಿಯಾಟ್ ಗ್ರಾಮದ ನದಿಗೆ ಅಡ್ಡಲಾಗಿ ರಬ್ಬರ್‌ಮರ ಬೆಳೆದಿದೆ. ನದಿಯ ಎರಡೂ ತುದಿಗಳ ಮಧ್ಯೆ ಇದರ ಬೇರುಗಳ ಒಂದರ ಮೇಲೊಂದು ಬೆಳೆದು ಸುಮಾರು 100 ಅಡಿಗಳಷ್ಟು ಉದ್ದಗಳಷ್ಟು ಸೇತುವೆ ನಿರ್ಮಿಸಿದೆ. ಸುಮಾರು 50 ಜನರು ಒಂದೇ ಬಾರಿ ಈ ಸೇತುವೆ ಮೇಲೆ ಪ್ರಯಾಣ ಬೆಳೆಸಬಹುದು. ಸೇತುವೆ ಮೇಲೆ ಓಡಾಡಲು ಅನುಕೂಲ ಆಗುವಂತೆ ಇಲ್ಲಿರುವ ಖಾಸಿ ಬುಡಕಟ್ಟು ಜನಾಂಗದವರು ಸುಮಾರು ಎರಡೂವರೆ ಸಾವಿರ ಮೆಟ್ಟಿಲುಗಳನ್ನು ನಿರ್ಮಾಣ ಮಾಡಿದ್ದಾರೆ.





ಮಾನವ ನಿರ್ಮಿತ ಸೇತುವೆಯ ಆಯುಷ್ಯ ಸರಾಸರಿ 100 ವರ್ಷವಾಗಿದ್ದರೆ, ನಿಸರ್ಗ ನೀಡಿದ ಈ ಕೊಡುಗೆಯ ಆಯಸ್ಸು 500 ವರ್ಷಕ್ಕೂ ಹೆಚ್ಚು ಎನ್ನುವುದು ಇದರ ಮತ್ತೊಂದು ಅಗ್ಗಳಿಕೆ...!

ಇಂಡೋನೇಷ್ಯಾದ ಸುಮಾತ್ರಾದಲ್ಲೂ ಇದೇ ರೀತಿಯ ನೈಸರ್ಗಿಕ ಸೇತುವೆಯಿದ್ದು, ಬೇರಿನಿಂದ ನಿರ್ಮಿತವಾಗಿದೆ. ಅರಳಿ ಮರದ ಬೇರಿನಿಂದ ರೂಪುಗೊಂಡ ಈ ಸೇತುವೆ 100 ವರ್ಷಗಳಷ್ಟು ಹಳೆಯದು.

■ ಸಿಂಚನಾ ಎಸ್.ಎನ್.